ರಾಜ್ಯದಲ್ಲಿ ಜಕಾತಿ ಆಕ್ಟ್ರಾಯ್ ಪದ್ಧತಿ

2177 - ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಜಕಾತಿ ಪದ್ಧತಿಯನ್ನು ಪುನಃ ಜಾರಿಗೆ ತರುವ ಬಗ್ಗೆ ಪ್ರಸ್ತಾವನೆ ಇದೆಯೇ?*

ಆ) *ಹಾಗಿದ್ದರೆ, ಅದಕ್ಕೆ ಕಾರಣಗಳೇನು?*

ಇ) *ಜಕಾತಿ ಪದ್ಧತಿಯನ್ನು ಪುನಃ ಜಾರಿಗೆ ತರುವ ಬಗ್ಗೆ ಪರೀಕ್ಷಿಸಲು ಯಾವುದಾದರೂ ಸಮಿತಿಯನ್ನು ನೇಮಿಸಲಾಗಿದೆಯೇ?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸ್ಥಳೀಯ ಸಂಸ್ಥೆಗಳ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ.

ಇ) ಹೌದು. ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ.

ಬೆಂಗಳೂರು ಮಹಾನಗರಪಾಲಿಕೆಗೆ ವರ್ಗಾಯಿಸದಿರುವ ಬಿ.ಡಿ.ಎ ಬಡಾವಣೆಗಳು

2178 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹತ್ತು ವರ್ಷಗಳ ಹಿಂದೆ ನಿರ್ಮಾಣಗೊಂಡು ಬೆಂಗಳೂರು ಮಹಾನಗರಪಾಲಿಕೆಗೆ ವರ್ಗಾಯಿಸದೆ ಇರುವ ಬಿ.ಡಿ.ಎ ಬಡಾವಣೆಗಳ ಹೆಸರು.*

ಆ) *ನಾಗರೀಕ ಸೌಲಭ್ಯಗಳ ನಿವೇಶನಗಳನ್ನು ಕೊಡುವುದಾದರೆ ಇಂತಹ ಬಡಾವಣೆಗಳನ್ನು ಮಹಾನಗರ ಪಾಲಿಕೆಯು ತೆಗೆದುಕೊಳ್ಳಲು ಒಪ್ಪಿದೆಯೇ?*

ಇ) *ಹಾಗಿದ್ದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಇಂತಹ ಬಡಾವಣೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ವರ್ಗಾಯಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) ;

ಅ) ಬಡಾವಣೆಗಳ ಹೆಸರಿನ ಪಟ್ಟಿಯನ್ನು ಲಗತ್ತಿಸಿದೆ.

ಆ) ಹೌದು.

ಇ) ಹೌದು. ಸರ್ಕಾರದ ಪ್ರಕಟನೆಯು ನಂ. ಹೆಚ್‌ಯುಡಿ 338 ಎಂಎನ್‌ಎಕ್ಸ್ 89, ದಿನಾಂಕ 24.7.1991 ರಂತೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗಿದೆ.

LIST OF LAYOUTS FORMET MORE THAN 10 YEARS AGO

Sl. No	*Name of the layouts*
1.	HAL IInd stage
2.	HAL IIIrd stage.
3.	Further extension of HAL IIIrd stage.
4.	Domlur layout.
5.	Koramangala Layout